

بسم اللهِ الرّحمٰن الرّحيم

# ಹಝ್ರತ್ ಉಮರ್(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **07–05–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ- بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಇಸ್ಲಾಮ್ ಸ್ವೀಕಾರದ ಬಗ್ಗೆ ಪ್ರಸ್ತಾಪ ನಡೆಯುತ್ತಿತ್ತು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರ್(ರ) ಇಸ್ಲಾಮ್ ಧರ್ಮವನ್ನು ನಿರಂತರವಾಗಿ ವಿರೋಧಿಸುತ್ತಿದ್ದರು. ಈ ಧರ್ಮದ ಸ್ಥಾಪಕರನ್ನೇ ಕೊನೆಗೊಳಿಸಲು ಅವರು ಒಂದು ದಿನ ನಿರ್ಧರಿಸಿದರು. ಹೀಗೆ ಅವರು ಖಡ್ಗವನ್ನು ಹಿಡಿದುಕೊಂಡು ಮನೆಯಿಂದ ಹೊರಟರು. ಅವರ ಸಹೋದರಿ ಮತ್ತು ಭಾವ ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ವಾರ್ತೆ ಮಾರ್ಗ ಮಧ್ಯೆ ಹಝ್ರತ್ ಉಮರ್(ರ)ರಿಗೆ ಗೊತ್ತಾಯಿತು. ಹಾಗೆ ಅವರು ಸಹೋದರಿಯ ಮನೆಗೆ ತಲುಪಿದರು. ಅಲ್ಲಿ ಓರ್ವ ಸಹಾಬಿ ಪವಿತ್ರ ಖುರ್‌ಆನ್ ಓದುತ್ತಿರುವ ಸ್ವರ ಕೇಳಿಬಂತು. ತಡವಾಗಿ ಬಾಗಿಲನ್ನು ತೆರೆಯಲಾದಾಗ, ಹಝ್ರತ್ ಉಮರ್(ರ)ರ ಕೋಪ ವರ್ಧಿಸಿತು. ಅವರ ಇಸ್ಲಾಂ ಸ್ವೀಕಾರದ ಬಗ್ಗೆ ಪ್ರಶ್ನಿಸಿದರು. ಅವರ ಭಾವ ಸಂಗತಿಯನ್ನು ಮರೆಮಾಚಲು ಪ್ರಯತ್ನಿಸಿದಾಗ ಹಝ್ರತ್ ಉಮರ್(ರ) ಅವರನ್ನು ಹೊಡೆಯಲು ಮುಂದಾದರು. ಹಝ್ರತ್ ಉಮರ್(ರ)ರ ಸಹೋದರಿ ಮಧ್ಯೆ ಪ್ರವೇಶಿಸಿದರು. ಉಮರ್(ರ)ರ ಕೈ ಅವರ ಮೂಗಿಗೆ ತಗುಲಿತು ಮತ್ತು ರಕ್ತ ಸುರಿಯಲು ತೊಡಗಿತು. ಹಝ್ರತ್ ಉಮರ್(ರ) ಭಾವುಕರಾಗುವ ವ್ಯಕ್ತಿಯಾಗಿದ್ದರು. ಆದ್ದರಿಂದ ಇದನ್ನು ನೋಡಿಕೊಂಡು ಅವರೊಳಗೆ ಕರುಣೆಯ ಭಾವನೆ ಉಂಟಾಯಿತು. ಅವರು ಪವಿತ್ರ ಖುರ್‌ಆನಿನ ಪುಟಗಳನ್ನು ತೋರಿಸಲು ವಿನಂತಿಸಿದರು. ಅದಕ್ಕಾಗಿ ಅವರ ಸಹೋದರಿ ಆಗ್ರಹ ಪಡಿಸಿದ ಪ್ರಕಾರ ಅವರು ಸ್ನಾನ ಮಾಡಿದರು. ಸ್ನಾನ ಮಾಡಿದ ನಂತರ ಅವರು ಪವಿತ್ರ ಖುರ್‌ಆನಿನ ಆಯತ್ತುಗಳನ್ನು ಓದಿದರು. ಅವರೊಳಗೆ ಒಂದು ಬದಲಾವಣೆ ಉಂಟಾಗಿದ್ದ ಕಾರಣದಿಂದ ಆ ವಚನಗಳನ್ನು ಓದಿ ಕೊನೆಗೊಳಿಸಿದ ನಂತರ ಅವರು ಶಹಾದತ್ ಕಲಿಮ ಉಚ್ಚರಿಸಿದರು. ಅನಂತರ ತೆರೆದ ಖಡ್ಗವನ್ನೇ ಹಿಡಿದುಕೊಂಡು ಅವರು ದಾರುಲ್ ಅರ್ಖಮಿಗೆ ಹೋಗಿ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು. ತೆರೆದ ಖಡ್ಗವನ್ನು ಹಿಡಿದುಕೊಂಡು ಬಾಗಿಲಿನ ಹೊರಗೆ ಹಝ್ರತ್ ಉಮರ್(ರ)ರನ್ನು ನಿಂತಿರುವುದಾಗಿ ನೋಡಿದ ಸಹಾಬರು ಚಿಂತಿತರಾದರು. ಬಾಗಿಲನ್ನು ತೆರೆಯಿರಿ, ಅವರು ಏನು ಮಾಡುವರು ಎಂದು ನಾನು ನೋಡುತ್ತೇನೆ ಎಂದು ಹಝ್ರತ್ ಹಂಝ(ರ) ಹೇಳಿದರು. ಬಾಗಿಲನ್ನು ತೆರೆಯಲಾದಾಗ ಹಝ್ರತ್ ಉಮರ್(ರ) ಮುಂದಕ್ಕೆ ಧಾವಿಸಿದರು. ಅವರು ಬಂದ ಉದ್ದೇಶದ ಬಗ್ಗೆ ಹಝ್ರತ್ ಪೈಗಂಬರ್(ಸ) ಅವರೊಡನೆ ಕೇಳಿದಾಗ ಅವರು ಹೀಗೆ ಹೇಳಿದರು: "ನಾನು ನಿಮ್ಮ ಸೇವಕನಾಗಲು ಹಾಜರಾಗಿದ್ದೇನೆ." ಒಂದು ತಾಸು ಮುಂಚೆ ಇಸ್ಲಾಮಿನ ಕಠಿಣ ಶತ್ರುವಾಗಿದ್ದ ಮತ್ತು ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಮನೆಯಿಂದ ಹೊರಟಿದ್ದ ಉಮರ್(ರ) ಒಂದೇ ಕ್ಷಣದಲ್ಲಿ ಉನ್ನತ ಮಟ್ಟದ ಸತ್ಯವಿಶ್ವಾಸಿಯಾಗಿ ಮಾರ್ಪಟ್ಟಿದ್ದರು.

ಇಸ್ಲಾಮಿನ ಆರಂಭ ಕಾಲಘಟ್ಟದಲ್ಲಿ ಮುಸ್ಲಿಮರಲ್ಲಿ ಕೇವಲ ಇಬ್ಬರು ವ್ಯಕ್ತಿಗಳನ್ನು ಶೂರರೆಂದು ಭಾವಿಸಲಾಗುತ್ತಿತ್ತು. ಒಬ್ಬರು ಹಝ್ರತ್ ಉಮರ್(ರ) ಮತ್ತು ಎರಡನೆಯದ್ದಾಗಿ ಹಝ್ರತ್ ಹಂಝ(ರ) ಇವರಿಬ್ಬರೂ ಮುಸ್ಲಿಮರಾದಾಗ, ಹಝ್ರತ್ ಪೈಗಂಬರ್(ಸ) ಅವರ ವಿನಂತಿ ಪ್ರಕಾರ ಕಅ್‌ಬ ಭವನದಲ್ಲಿ ಬಹಿರಂಗವಾಗಿ ನಮಾಝ್ ಅನುಷ್ಠಿಸಿದರು.

ಹಝ್ರತ್ ಉಮರ್(ರ) ಇಸ್ಲಾಂ ಧರ್ಮವನ್ನು ಸ್ವೀಕರಿಸಿದ ಸುದ್ದಿ ಹರಡಿದ ಕೂಡಲೇ ಸತ್ಯನಿಷೇಧಿಗಳು ಅವರ ಮನೆಗೆ ಮುತ್ತಿಗೆ ಹಾಕಿದರು. ಹೀಗಾದಾಗ, ಮಕ್ಕದ ಶ್ರೇಷ್ಠ ಸರದಾರರಾದ ಆಸ್ ಬಿನ್ ವಾಯಿಲ್ ಉಮರ್(ರ)ರಿಗೆ ಅಭಯ ನೀಡುವುದಾಗಿ ಘೋಷಿಸಿದರು. ಹಝ್ರತ್ ಉಮರ್(ರ) ಕೆಲವು ದಿನಗಳು ಸುರಕ್ಷಿತರಾಗಿದ್ದರು. ಆದರೆ ಅವರ ಧಾರ್ಮಿಕ ಅಭಿಮಾನ ಮತ್ತು ಆವೇಶದ ಕಾರಣದಿಂದ ಅವರು ಈ ಅವಸ್ಥೆಯನ್ನು ಸಹಿಸುತ್ತಿರಲಿಲ್ಲ. ಅವರು ಆಸ್ ಬಿನ್ ವಾಇಲ್‌ರ ಅಭಯದಿಂದ ಹೊರಗೆ ಬಂದರು. ಹಝ್ರತ್ ಉಮರ್(ರ) ಹೇಳುತ್ತಾರೆ: ಅದರ ನಂತರ ಮಕ್ಕದ ಗಲ್ಲಿಗಳಲ್ಲಿ ನನ್ನನ್ನು ಜನರು ಯಾವಾಗಲೂ ಹೊಡೆಯುತ್ತಿದ್ದರು.

ಹಝ್ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿಯುಲ್ಲಾಹ್ ಶಾಹ್ ಸಾಹಿಬ್ ಬರೆಯುತ್ತಾರೆ: ಆಸ್ ಬಿನ್ ಅವಾಇಲ್‌ನ ಗೋತ್ರವಾದ ಬನೂ ಸಹಂ ಮತ್ತು ಹಝ್ರತ್ ಉಮರ್(ರ)ರ ಕುಟುಂಬವಾದ ಬನೂ ಅದ್ದಿ ಪರಸ್ಪರ ಮೈತ್ರಿಯಿಂದಿದ್ದರು. ಈ ಒಪ್ಪಂದ ಮತ್ತು ಗೆಳೆತನದ ಕಾರಣದಿಂದ ಹಝ್ರತ್ ಉಮರ್(ರ)ರನ್ನು ಸಹಾಯ ಮಾಡುವುದು ತನ್ನ ನೈತಿಕ ಕರ್ತವ್ಯವೆಂದು ಆಸ್ ಬಿನ್ ವಾಇಲ್ ಗಣಿಸಿದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರಿಗೆ ಎಷ್ಟೆಲ್ಲ ಕಠಿಣ ಶತ್ರುಗಳಿದ್ದರು. ಆದರೆ ಅನಂತರ ಅವರಲ್ಲಿ ಎಂತಹ ಮಾರ್ಪಾಟು ಆಯಿತು ಎಂದು ನೋಡಿರಿ. ಇಸ್ಲಾಮಿನ ವಿರುದ್ಧ ಲಾಠಿ ಹಿಡಿದುಕೊಂಡು ಸುತ್ತಾಡುತ್ತಿದ್ದ ಹಝ್ರತ್ ಉಮರ್(ರ) ಇಸ್ಲಾಂ ಧರ್ಮವನ್ನು ಸ್ವೀಕರಿಸಿದಾಗ ದಿನರಾತ್ರಿ ಧರ್ಮಕ್ಕಾಗಿ ತನ್ನ ಜೀವವನ್ನು ಅಪಾಯದಲ್ಲಿ ಹಾಕಲು ತೊಡಗಿದರು.

ಹಝ್ರತ್ ಉಮರ್(ರ)ರ ಇಸ್ಲಾಂ ಸ್ವೀಕಾರದ ಘಟನೆಯನ್ನು ಪ್ರಸ್ತಾಪಿಸುತ್ತಾ ಹಝ್ರತ್ ಪೈಗಂಬರ್(ಸ)ರನ್ನು ವಧಿಸುವವರಿಗೆ ಇನಾಮುಗಳನ್ನು ಕೊಡುವುದಾಗಿ ಅಬುಜಹಲ್ ಮಾಡಿದ ಘೋಷಣೆ ಮತ್ತು ಹಝ್ರತ್ ಪೈಗಂಬರ್(ಸ) ಕಅ್‌ಬ ಭವನದಲ್ಲಿ ದುಆ ಮಾಡುತ್ತಿರುವುದಾಗಿ ಹಝ್ರತ್ ಉಮರ್(ರ) ರಾತ್ರಿ ಸಮಯದಲ್ಲಿ ಆಲಿಸಿದ ಘಟನೆಯ ಕುರಿತು ವಿವರಿಸಿದ ನಂತರ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಹಝ್ರತ್ ಉಮರ್(ರ) ಸ್ವಯಂ ಹೇಳುತ್ತಾರೆ – ಹಝ್ರತ್ ಪೈಗಂಬರ್(ಸ) ಸಜ್‌ದದಲ್ಲಿ ಅಳುತ್ತಾ ಎಷ್ಟು ದುಆಗಳನ್ನು ಮಾಡಿದರು ಎಂದರೆ, ನಾನು ಅದರಿಂದ ನಡುಗಿ ಹೋದೆನು. ಆ ಪ್ರಾರ್ಥನೆಗಳನ್ನು ಆಲಿಸಿಕೊಂಡು ನನ್ನ ಕರುಳು ಕರಗಿ ಹೋಗುತ್ತಿತ್ತು. ಕೊನೆಗೆ ಸತ್ಯದ ಪ್ರತಾಪದ ಕಾರಣದಿಂದ ನನ್ನ ಕೈಯಿಂದ ಖಡ್ಗ ಜಾರಿ ಬಿತ್ತು. ಹಝ್ರತ್ ಪೈಗಂಬರ್(ಸ)ರ ಈ ಸ್ಥಿತಿಯನ್ನು ಕಂಡು ಅವರು ಸತ್ಯವಂತರು ಮತ್ತು ಅವರು ಖಂಡಿತ ವಿಜಯಿಯಾಗುವರು ಎಂದು ನನಗೆ ಅರಿವಾಯಿತು."

ಮತ್ತೊಂದೆಡೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಕೊನೆಗೆ ಉಮರ್(ರ) ಮುಸ್ಲಿಮರಾದರು. ಅನಂತರ ಅಬೂಜಹಲ್ ಮತ್ತು ಇಸ್ಲಾಮಿನ ಇತರ ವಿರೋಧಿಗಳೊಂದಿಗೆ ಅವರಿಗೆ ಇದ್ದ ಸ್ನೇಹಬಂಧ ಮತ್ತು ಸಂಬಂಧ ಕ್ಷಣದಲ್ಲಿ ಮುರಿದುಹೋಯಿತು. ಅವುಗಳ ಜಾಗದಲ್ಲಿ ಒಂದು ಹೊಸ ಸಹೋದರ ಸಂಬಂಧ ಸ್ಥಾಪಿತವಾಯಿತು. ಹಝ್ರತ್ ಅಬೂಬಕರ್(ರ) ಮತ್ತು ಇತರ ಸಹಾಬಿಯರು ಅವರಿಗೆ ಲಭಿಸಿದರು. ಅನಂತರ ಅವರ ಹಳೆಯ ಸಂಬಂಧದ ಬಗ್ಗೆ ಅವರಿಗೆ ಆಲೋಚನೆ ಕೂಡ ಉಂಟಾಗಲಿಲ್ಲ.

(ಹಝ್ರತ್ ಉಮರ್(ರ)ರ ಇಸ್ಲಾಂ ಸ್ವೀಕಾರದ ಕುರಿತು ಹಝ್ರತ್ ಮಸೀಹ್ ಮೌಊದ್(ಅ)ರ ಮೂರು ಬೇರೆ ಬೇರೆ ಉಲ್ಲೇಖಗಳನ್ನು ಮುಂದಿರಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್(ಅಯ್ಯದಹುಲ್ಲಾಹ್) ಹೇಳಿದರು:) ಈ ಮೂರೂ ಕಡೆಗಳಲ್ಲಿ ರಾತ್ರಿ ಸಮಯದಲ್ಲಿ ಕಅ್‌ಬ ಭವನದಲ್ಲಿ ಹಲ್ಲೆ ನಡೆಸಿದ ಘಟನೆಯ ಪ್ರಸ್ತಾಪವಿದೆ. ಆ ರಾತ್ರಿಯ ಘಟನೆಯ ನಂತರ ಸಹ ಆತ್ಮದ ದುಷ್ಪ್ರೇರಣೆಗೆ ಒಳಗಾಗಿ ಬೆಳಗ್ಗಿನ ಸಮಯದಲ್ಲೂ ಅವರು ಹಲ್ಲೆ ನಡೆಸಲು ಹೊರಟಿರಬಹುದು. ಆಗ ಸಹೋದರಿ ಮತ್ತು ಭಾವನಿಗೆ ಸಂಬಂಧಿಸಿದ ಘಟನೆ ನಡೆದಿರಬಹುದು.

ಹಝ್ರತ್ ಇಬ್ನು ಉಮರ್(ರ) ಹೇಳುತ್ತಾರೆ: ಹಝ್ರತ್ ಉಮರ್(ರ) ಇಸ್ಲಾಂ ಧರ್ಮವನ್ನು ಸ್ವೀಕರಿಸಿದಾಗ ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡುತ್ತಾ ಮೂರು ಬಾರಿ ಹಝ್ರತ್ ಉಮರ್(ರ)ರ ಎದೆಯಲ್ಲಿ ಕೈಯನ್ನು ಸವರಿದರು: "ಹೇ ಅಲ್ಲಾಹ್, ಇವರ ಹೃದಯದಲ್ಲಿ ಇರುವ ಹಗೆಯನ್ನು ದೂರಮಾಡು ಮತ್ತು ಅದನ್ನು ಸತ್ಯವಿಶ್ವಾಸವಾಗಿ ಬದಲಿಸು."

ಒಂದು ಸಲ ಹಝ್ರತ್ ಪೈಗಂಬರ್(ಸ)ರೊಡನೆ ಹಝ್ರತ್ ಉಮರ್(ರ) ಹೇಳಿದರು: ನೀವು ನನಗೆ ಎಲ್ಲ ವಸ್ತುಗಳಿಗಿಂತ ಪ್ರಿಯರಾಗಿದ್ದೀರಿ – ನನ್ನ ಸ್ವಂತ ಆತ್ಮದ ಹೊರತು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ನಿನಗೆ ನಾನು ನಿನ್ನ ಸ್ವಂತ ಆತ್ಮಕ್ಕಿಂತ ಪ್ರಿಯನಾಗುವ ತನಕ ನಿನ್ನ ವಿಶ್ವಾಸ ಪರಿಪೂರ್ಣವಾಗಲಿಕ್ಕಿಲ್ಲ. ಹಝ್ರತ್ ಉಮರ್(ರ) ಹೇಳಿದರು: ಅಲ್ಲಾನಾಣೆ, ಈಗ ನೀವು ನನಗೆ ನನ್ನ ಆತ್ಮಕ್ಕಿಂತ ಪ್ರಿಯರಾಗಿರುವಿರಿ. ಹಝ್ರತ್ ಪೈಗಂಬರ್(ಸ) ಹೇಳಿದರು: ಹಾಗಾದರೆ ಈಗ ಸರಿಯಾಯಿತು.

ಹಝ್ರತ್ ಉಮರ್(ರ) ಮದೀನಕ್ಕೆ ಹಿಜ್ರತ್ ಮಾಡಿದ ಕುರಿತು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಒಂದು ವರದಿ ಹೀಗೆ ಲಭಿಸುತ್ತದೆ: ಹಝ್ರತ್ ಉಮರ್(ರ) ಹಿಜ್ರತ್ ಮಾಡಲು ಉದ್ದೇಶಿಸಿದಾಗ ಖಡ್ಗ ಮತ್ತು ಬಿಲ್ಲು ಬಾಣವನ್ನು ಹಿಡಿದುಕೊಂಡು ಕಅ್‌ಬ ಭವನಕ್ಕೆ ಹೋಗಿ ಹೀಗೆ ಘೋಷಿಸಿದರು: ಯಾರು ಅವರ ತಾಯಿಯನ್ನು ನಷ್ಟಪಡಿಸಲು, ಮಕ್ಕಳನ್ನು ಅನಾಥರನ್ನಾಗಿ ಮಾಡಲು ಮತ್ತು ಪತ್ನಿಯನ್ನು ವಿಧವೆಯನ್ನಾಗಿ ಮಾಡಲು ಬಯಸುತ್ತಾರೋ ಅವರು ನನ್ನನ್ನು ಈ ಕಣಿವೆಯ ಆಚೆ ಕಡೆ ಭೇಟಿಯಾಗಲಿ.

ಈ ರೀತಿಯಲ್ಲಿ ಬಹಿರಂಗವಾಗಿ ಹಿಜ್ರತ್ ಮಾಡಿದ ಕುರಿತು ಇದೇ ಒಂದು ವರದಿ ಲಭಿಸುತ್ತದೆ. ಹೆಚ್ಚಿನ ಚರಿತ್ರೆಗಾರರು ಭಿನ್ನವಾದ ಅಭಿಪ್ರಾಯವನ್ನು ಹೊಂದಿರುವರು. ಉದಾಹರಣೆಗೆ ಮುಹಮ್ಮದ್ ಹುಸೈನ್ ಹೈಕಲ್ ಇದರ ಬಗ್ಗೆ ಚರ್ಚಿಸುತ್ತಾ ಹೇಳುತ್ತಾರೆ: ಮೌನವಾಗಿ ಮತ್ತು ರಹಸ್ಯವಾಗಿ ಹಿಜ್ರತ್ ಮಾಡಲು ಹಝ್ರತ್ ಪೈಗಂಬರ್(ಸ) ಆದೇಶಿಸಿದ್ದರು. ಹೀಗಿರುವಾಗ ಇದನ್ನು ಹಝ್ರತ್ ಉಮರ್(ರ) ಅನುಸರಿಸದೇ ಇರಲು ಹೇಗೆ ಸಾಧ್ಯ?

ಮುಹಾಜಿರ್‌ಗಳಲ್ಲಿ ಹಝ್ರತ್ ಮುಸ್‌ಅಬ್ ಬಿನ್ ಉಮೈರ್ ಮತ್ತು ಹಝ್ರತ್ ಇಬ್ನು ಉಮ್ಮೇ ಮಕ್ತೂಮ್‌ರ ನಂತರ ಹಝ್ರತ್ ಉಮರ್(ರ) ಇಪ್ಪತ್ತು ವ್ಯಕ್ತಿಗಳೊಂದಿಗೆ ಮದೀನಕ್ಕೆ ತಲುಪಿದರು. ಖುಬಾದಲ್ಲಿ ಹಝ್ರತ್ ಉಮರ್(ರ) ರಿಫಾಅ್ ಬಿನ್ ಅಬ್ದುಲ್ ಮುಂಧಿರ್‌ರ ಅತಿಥಿಯಾಗಿದ್ದರು. ಮಕ್ಕದಲ್ಲಿ ಹಝ್ರತ್ ಉಮರ್(ರ)ರ ಸಾಹೋದರ್ಯ ಸಂಬಂಧವನ್ನು ಹಝ್ರತ್ ಅಬೂಬಕರ್(ರ)ರೊಂದಿಗೆ ಮತ್ತು ಮದೀನಕ್ಕೆ ತಲುಪಿದ ನಂತರ ಹಝ್ರತ್ ಉವೈಮ್ ಬಿನ್ ಸಾಅದ(ರ)ರೊಂದಿಗೆ ಹಝ್ರತ್ ಪೈಗಂಬರ್(ಸ) ಸ್ಥಾಪಿಸಿದ್ದರು. ಹಝ್ರತ್ ಉಮರ್(ರ)ರ ಸಾಹೋದರ್ಯ ಸಂಬಂಧ ಹಝ್ರತ್ ಉತ್‌ಬಾನ್ ಬಿನ್ ಮಾಲಿಕ್(ರ)ರೊಂದಿಗೆ ಮಾಡಲಾಗಿತ್ತು ಎಂದು ಹಝ್ರತ್ ಮಿರ್ಝಾ ಬಶೀರ್ ಅಹ್ಮದ್(ರ) ಬರೆದಿರುವರು.

ಅಧಾನಿನ ಆರಂಭದ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಅಬ್ದುಲ್ಲಾಹ್ ಬಿನ್ ಝೈದ್(ರ)ರಿಗೆ ಅಲ್ಲಾಹನು ಕನಸಿನ ಮೂಲಕ ಅಧಾನನ್ನು ಕಲಿಸಿಕೊಟ್ಟನು. ಅವರ ಕನಸಿನ ಆಧಾರದಲ್ಲೇ ಹಝ್ರತ್ ಪೈಗಂಬರ್(ಸ) ಮುಸ್ಲಿಮರಲ್ಲಿ ಅಧಾನನ್ನು ರೂಢಿಗೆ ತಂದರು. ಹಝ್ರತ್ ಉಮರ್(ರ) ಹೇಳುತ್ತಾರೆ: ನನಗೂ ಅಲ್ಲಾಹನು ಇದೇ ಅಧಾನನ್ನು ಕಲಿಸಿಕೊಟ್ಟಿದ್ದನು. ಆದರೆ ಬೇರೊಬ್ಬ ವ್ಯಕ್ತಿ ಇದೇ ಸಂಗತಿಯನ್ನು ವಿವರಿಸಿದ ಕಾರಣದಿಂದ ನಾನು ಇಪ್ಪತ್ತು ದಿನಗಳ ತನಕ ಸುಮ್ಮನಿದ್ದೆ.

(ಹಝ್ರತ್ ಉಮ(ರ)ರ ಪ್ರಸ್ತಾಪ ಮುಂದುವರೆಸಲಾಗುವುದು ಎಂದು ತಿಳಿಸುತ್ತಾ ಹಝ್ರತ್ ಖ಼ಲೀಫತುಲ್ ಮಸೀಹ್‌ರು ಹೇಳಿದರು:) ಇಂದು ರಮಝ಼ಾನಿನ ಕೊನೆಯ ಜುಮಾ ಆಗಿದೆ. ರಮಝ಼ಾನಿನಲ್ಲಿ ಮಾಡಲು ಸೌಭಾಗ್ಯ ಲಭಿಸಿದ ಸತ್ಕರ್ಮಗಳನ್ನು ರಮಝ಼ಾನಿನ ನಂತರ ಸಹ ಮುಂದುವರೆಸಲು ಪ್ರಯತ್ನಿಸಬೇಕು. ಕಳೆದ ಜುಮಾದಲ್ಲಿ ನಾನು ದುರೂದ್ ಪ್ರಾರ್ಥನೆ ಮತ್ತು ಇಸ್ತಿಗ್‌಼ಫಾರ್ ಮಾಡುವ ಕುರಿತು ನಿಮ್ಮ ಗಮನವನ್ನು ಸೆಳೆದಿದ್ದೆ. ಅದು ಕೇವಲ ರಮಝ಼ಾನಿನ ತನಕ ಪರಿಮಿತವಲ್ಲ. ರಮಝ಼ಾನ್ ತಿಂಗಳು ಕೊನೆಗೊಂಡ ನಂತರ ದುಆಗಳನ್ನು ಮತ್ತು ಇಸ್ತಿಗ್‌ಫಾರನ್ನು ಮರೆತು ಬಿಡುವ ರೀತಿಯಲ್ಲಿ ನಾವು ಲೌಕಿಕವಾದ ಕೆಲಸಗಳಲ್ಲಿ ಮುಳುಗಬಾರದು. ಈ ಕಾಲಘಟ್ಟದಲ್ಲಿ ದಜ್ಜಾಲಿನ ಕುತಂತ್ರಗಳು ಹೊಸ ಹೊಸ ಅಸ್ತ್ರಗಳನ್ನು ಉಪಯೋಗಿಸುತ್ತಿವೆ. ಈ ಪೈಶಾಚಿಕ ಮತ್ತು ದಜ್ಜಾಲಿನ ಆಕ್ರಮಣಗಳಿಂದ ನಮ್ಮನ್ನು ಮತ್ತು ನಮ್ಮ ಸಂತಾನಗಳನ್ನು ಸುರಕ್ಷಿತಗೊಳಿಸಲು ಅಲ್ಲಾಹನ ಅಸ್ತಿತ್ವ ಮತ್ತು ಇಸ್ಲಾಮಿನ ಮನೋಹರವಾದ ಅಧ್ಯಾಪನೆಗಳ ಬಗ್ಗೆ ಅವರಿಗೆ ತಿಳಿಸುವುದು ಆವಶ್ಯಕ. ನಮ್ಮ ಸಂಬಂಧ ಅಲ್ಲಾಹನೊಂದಿಗೆ ಸುದೃಢವಾಗಿದ್ದರೆ ಮಾತ್ರ ಅದು ಸಾಧ್ಯ. ನಮ್ಮ ನಮಾಝ಼್‌ಗಳು, ನಮ್ಮ ಆರಾಧನೆಗಳು ಉನ್ನತ ಮಟ್ಟದ್ದಾಗಿರಬೇಕು. ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ಕೊಟ್ಟು ನಮ್ಮ ಅವಸ್ಥೆಗಳ ಬಗ್ಗೆ ಗಮನಹರಿಸಿದರೆ ಮಾತ್ರ ನಾವು ನಮ್ಮನ್ನು ಮತ್ತು ನಮ್ಮ ಸಂತಾನಗಳನ್ನು ರಕ್ಷಿಸಬಹುದು ಎಂಬ ಸಂಗತಿಯನ್ನು ಹಿರಿಯರು ಮತ್ತು ಆರಂಭ ಕಾಲದ ಅಹ್ಮದಿಯರ ಮಕ್ಕಳು ಹಾಗೂ ಸ್ವತಃ ಬೈಅತ್ ಮಾಡಿ ಬಂದ ಅಹ್ಮದಿಯರು ನೆನಪಿನಲ್ಲಿಡಬೇಕು.

ಲೋಕದಲ್ಲಿ ಹರಡಿರುವ ಕೊರೋನ ಮಹಾಮಾರಿಯಿಂದ ರಕ್ಷಣೆ ಪಡೆಯಲು ಮತ್ತು ಅಲ್ಲಾಹನ ಕೃಪೆ ಪಡೆಯಲು ಸಹ ವಿಶೇಷವಾಗಿ ದುಆಗಳನ್ನು ಮಾಡಿರಿ. ಅದೇ ರೀತಿಯಲ್ಲಿ ಅಹ್ಮದಿಯ್ಯತ್ತಿನ ವಿರೋಧ ಶಕ್ತವಾಗಿ ಇರುವ ದೇಶಗಳ ಅಹ್ಮದಿಯರಿಗಾಗಿಯೂ ದುಆ ಮಾಡಿರಿ. ಪಾಕಿಸ್ತಾನದ ಅಹ್ಮದಿಯರು ವಿಶೇಷವಾಗಿ ಸದಖ, ದಾನಧರ್ಮಗಳು ಮತ್ತು ಪ್ರಾರ್ಥನೆಗಳ ಕಡೆಗೆ ಯಾವಾಗಲೂ ಬಹಳ ಹೆಚ್ಚು ಗಮನವಹಿಸಬೇಕು. **ರಬ್ಬಿ ಕುಲ್ಲು ಶೈಇನ್ ಖ಼ಾದಿಮುಕ ರಬ್ಬಿ ಫಹ್‌ಫಝ಼್‌ನೀ ವನ್‌ಸುರ್‌ನೀ ವರ್‌ಹಮ್‌ನೀ** ಮತ್ತು **ಅಲ್ಲಾಹುಮ್ಮ ಇನ್ನಾ ನಜ್‌ಅಲುಕ ಫೀ ನುಹೂರಿಹಿಂ ವ ನಊಧು಼ಬಿಕ ಮಿನ್ ಶುರೂರಿಹಿಂ.** ಈ ದುಆಗಳನ್ನು ಬಹಳವಾಗಿ ಮಾಡಿರಿ. ರಮಝ಼ಾನಿನಲ್ಲಿ ನಮಾಝಿನ ಕಡೆಗೆ ಕಾಳಜಿ ವಹಿಸಲಾದ ರೀತಿಯಲ್ಲೇ ರಮಝ಼ಾನ್ ನಂತರ ಸಹ ಅದು ಮುಂದುವರೆಸಬೇಕು. ಎಲ್ಲ ರೀತಿಯ ಪಿತೂರಿಗಳಿಂದ ರಕ್ಷಣೆ ಪಡೆಯಲು, ಮುಸ್ಲಿಂ ಸಮುದಾಯ ಮತ್ತು ಮನುಷ್ಯಕುಲಕ್ಕೆ ಒಟ್ಟಾಗಿ ಸಹ ದುಆ ಮಾಡಿರಿ. ಅಲ್ಲಾಹನು ಎಲ್ಲರಿಗೂ ಸೌಭಾಗ್ಯ ನೀಡಲಿ – ಆಮೀನ್.

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِی الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 07-05-2021*

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim |***Layout:*** U Basheer Ahmad

***Published By:*** Kannada Isha’at Team for Nazarath Nashr-O-Isha’ath, Qadian

***Email*:** *khutuba.kannada@gmail.com*

**You can find all the Sermons archived at**: www.alislam.org/friday-sermon